# ಉಪ್ಪು- ಉಪ್ಪಿನಕಾಯಿ ಡಬ್ಬಿ

ಉಪ್ಪು ಮತ್ತು ಉಪ್ಪಿನ ಕಾಯಿ ಹಾಕಿಡಲು ಹಿಂದೆ ಜನಸಾಮಾನ್ಯರು ಪಿಂಗಾಣಿ ಮತ್ತು ಪ್ಲಾಸ್ಟಿಕ್ ಬಾಕ್ಸ್ ಬಳಸುತ್ತಿರಲಿಲ್ಲ. ಅದರ ಬದಲು ಮರದಿಂದ ತಯಾರಿಸಿದ ಎರಡು ಕವಾಟಗಳಿರುವ ಮರದ ಡಬ್ಬಿ ಬಳಸುತ್ತಿದ್ದರು. ಅದರಲ್ಲಿ ಒಂದರಲ್ಲಿ ಉಪ್ಪು, ಮತ್ತೊಂದರಲ್ಲಿ ಉಪ್ಪಿನಕಾಯಿ ಹಾಕುತ್ತಿದ್ದರು. ಇದು ದಿನ ನಿತ್ಯ ಊಟಕ್ಕೆ ಬಳಸುವ ಸಣ್ಣ ಡಬ್ಬಿ.. ಇದನ್ನು ಕಲಾಕಾರ ತುಂಬಾ ನೈಪುಣ್ಯದಿಂದ ತಯಾರಿಸುತ್ತಿದ್ದ.

**-ಲೀಲಾವತಿ ಜಯಶೀಲ, ಶಿವಮೊಗ್ಗ**





# ಬಂಡೆ ಮನೆ

ನಿಸರ್ಗವು ಏನೆಲ್ಲಾ ವೈಚಿತ್ರಗಳನ್ನು ಹೊಂದಿದೆ ಎನ್ನುವುದಕ್ಕೆ ಸಾಕ್ಷಿ ಈ ಬಂಡೆಗಳು. ಉತ್ತರ ಕನ್ನಡದ ಸಾತೊಡ್ಡಿ ಜಲಪಾತಕ್ಕೆ ಹೋಗುವ ದಾರಿಯಲ್ಲಿ ಹೊಳೆ ದಂಡೆ ಬದಿಯಲ್ಲಿ ಬಂಡೆಗಳು ಕಾಡಿನ ನಡುವೆ ಬೃಹದಾಕಾರವಾಗಿ ಬೆಳೆದಿವೆ. ಈ ಬಂಡೆ ಸುಮಾರು ಐವತ್ತು ಅಡಿಗಿಂತಲೂ ಎತ್ತರವಿದ್ದು ಕೆಳಗಡೆ ಮನೆ ಮಾಡುವಷ್ಟು ವಿಶಾಲವಾಗಿದೆ. ಪ್ರಕೃತಿಯ ನಡುವೆ, ಬಂಡೆಯ ಕೆಳಗಡೆ ಮನೆ ಮಾಡಿದರೆ ತಣ್ಣನೆಯ ಜೀವನ ಸಾಗಿಸಬಹುದು.

**-ಗಣಪತಿ ಕಂಚಿಪಾಲ,**
**ತೇಲಂಗಾರ**

# ಹುಣಸೆ ಬೀಜದ ಜೇನುಗೂಡು

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸ್ವಸಹಾಯ ಸಂಘದ ಸದಸ್ಯರು ಕೃಷಿ ಉತ್ಸವದಲ್ಲಿ ಪ್ರದರ್ಶನಕ್ಕೆಂದು ತಯಾರಿಸಿದ ಜೇನುಗೂಡಿದು. ಇದರಲ್ಲಿ ಸುಮಾರು ಎರಡು ಸಾವಿರದಷ್ಟು ಹುಣಸೆ ಬೀಜಗಳಿದ್ದು ನೋಡುಗರ ಮೆಚ್ಚುಗೆಗೆ ಪಾತ್ರವಾಯಿತು.

**-ಚಂದ್ರಹಾಸ ಚಾರ್ಮಾಡಿ, ಬೆಳ್ತಂಗಡಿ**

